9. As of the date of this Offer Opening Public Announcement, except of being in receipt of necessary approval from SEBI, inter-alia for change in control and management of India Cements Investment Services Limited, a subsidiary of the Target Company, necessary statutory approval required for the Offer has been obtained. However, in case of any other statutory approvals being required by the Acquirers at a later date before the closure of the Tendering Period, the Offer shall be subject to all such statutory approvals and the Acquirers shall make the necessary applications for such approvals.
10. Revised Schedule of Activities:

Tentative Schedule of Activities	Original Schedule of Activities (Day and Date)	Revised Schedule of Activities (Day and Date*)
Date of the Public Announcement	Friday, 24 July 2026	Friday, 24 July 2026
Date of publication of the Detailed Public Statement	Friday, 31 July 2026	Friday, 31 July 2026
Last date of filing of the Draft Letter of Offer with SEBI	Friday, 07 August 2026	Friday, 07 August 2026
Last date for a Competing Offer^	Friday, 21 August 2026	Friday, 21 August 2026
Identified Date#	Wednesday, 02 September 2026	Tuesday, 13 October 2026
Last date by which Letter of Offer will be dispatched to the Shareholders	Wednesday, 09 September 2026	Wednesday, 21 October 2026
Last date by which an independent committee of the Board of Target Company shall give its recommendation	Friday, 11 September 2026	Friday, 23 October 2026
Last date for revising the Offer Price/ Offer Size	Tuesday, 15 September 2026	Monday, 26 October 2026
Advertisement of Schedule of Activities for Open Offer, status of statutory and other approvals in newspaper	Wednesday, 16 September 2026	Tuesday, 27 October 2026
Date of commencement of tendering period (Offer Opening Date)	Thursday, 17 September 2026	Wednesday, 28 October 2026
Date of expiry of tendering period (Offer Closing Date)	Wednesday, 30 September 2026	Wednesday, 11 November 2026
Date by which all requirements including payment of consideration would be completed	Thursday, 15 October 2026	Thursday, 26 November 2026

Notes:

**Where last dates are mentioned for certain activities, such activities may take place on or before the respective last dates.*

 # Identified Date is only for the purpose of determining the names of the shareholders as on such date to whom the Letter of Offer would be sent. All owners (registered or unregistered) of Equity Shares of the Target Company (except (a) the Promoter and Promoter Group of the Target Company; (b) the Acquirers and any person deemed to be acting in concert with them; (c) the parties to the Share Purchase Agreement; (d) any person deemed to be acting in concert with the parties to SPA) are eligible to participate in the Offer at any time before the closure of the Offer.

^There was no competing offer as on date.

The Acquirers accept responsibility for the information contained in this Advertisement and for the obligations of the Acquirers as laid down in the SEBI (SAST) Regulations, 2011 and subsequent amendments made thereof. All other terms and conditions of the offer shall remain unchanged. This Advertisement will also be available on the website of SEBI i.e. www.sebi.gov.in.

Issued by the Manager to the Offer

FINTELLECTUAL CORPORATE ADVISORS

Fintellectual Corporate Advisors Private Limited
Corporate Office: B-20, Second Floor, Sector-1, Noida-201301
Tel No.: +91-120-4266080
Website: www.fintellectualadvisors.com
Email Address: info@fintellectualadvisors.com
Contact Person: Mr. Amit Puri
SEBI Registration Number: INM000012944
Validity: Permanent
CIN: U74999DL2021PTC377748

Place: Noida
Date: October 26, 2026

Sd/-	Sd/-	Sd/-	Sd/-
Sandeep Jain (Acquirer 1)	Vikas Garg (Acquirer 2)	Rahul Nagar (Acquirer 3)	Mrs. Neha Agarwal (PAC)

DRC Systems India Limited

[CIN: L72900GJ2012PLC070106]

Registered Office: 24th Floor, GIFT Two Building, Block No. 56, Road – 5C, Zone - 5, GIFT CITY, Gandhinagar – 382 050

Tel: +91 79 6777 2222, **Email:** ir@drcsystems.com, **Website:** www.drcsystems.com

EXTRACT OF STATEMENT OF STANDALONE AND CONSOLIDATED UNAUDITED FINANCIAL RESULTSFOR THE QUARTER AND SIX MONTHS ENDED ON SEPTEMBER 30, 2026

(Rupees in lakhs, except per share data and if otherwise stated)

Particulars	Standalone			Consolidated		
	Quarter ended on 30-09-2026 (Unaudited)	Six Months ended on 30-09-2026 (Unaudited)	Quarter ended on 30-09-2025 (Unaudited)	Quarter ended on 30-09-2026 (Unaudited)	Six Months ended on 30-09-2026 (Unaudited)	Quarter ended on 30-09-2025 (Unaudited)
Total income	1,306.1	2,748.6	1,218.1	2,246.9	4,699.1	2,313.8
Net Profit / (Loss) for the period before tax	120.4	230.5	126.6	436.7	1,020.0	477.8
Net Profit / (Loss) for the period after tax	90.1	172.4	98.8	406.4	961.9	416.7
Total Comprehensive Income for the period (comprising Profit / (Loss) for the period after tax and other comprehensive income after tax)	90.1	172.4	98.8	406.4	961.9	416.7
Paid-up equity share capital (Face Value of the share Re. 1/- Each)	1,440.8	1,440.8	1,340.8	1,440.8	1,440.8	1,340.8
Reserves (excluding Revaluation Reserve as shown in the Balance Sheet of previous year)						
Earnings Per Share (Face value of Re. 1/- each) (not annualised)						
Basic:	0.06	0.12	0.07	0.28	0.67	0.31
Diluted:	0.06	0.12	0.07	0.28	0.67	0.31

Note:

1) The above financial results are reviewed and recommended by the Audit Committee and approved by the Board of Directors at its meeting held on October 26, 2026.

2) The above is an extract of the detailed format of Unaudited Financial Results filed with the Stock Exchanges under Regulation 33 of the SEBI (LODR) Regulations, 2015. The full format of financial results are available on the Stock Exchanges websites at www.bseindia.com and www.nseindia.com and on the Company website at www.drcsystems.com. The same can be accessed by scanning the QR Code provided below:

For DRC Systems India Limited
Sd/-
Hiten A. Barchha

Date: October 26, 2026
Managing Director

Place: Gandhinagar
(DIN: 05251837)

Bandhan AMC Limited
CIN: U65993MH1999PLC123191
Regd. Office Address: 6th Floor, Tower 1C, One World Center, Senapati Bapat Marg, Prabhadevi (W), Mumbai - 400 013. **Phone:** +91-22-6628 9999, **Email:** investormf@bandhanamc.com
Website: www.bandhanmutual.com, www.bandhanamc.com

Bandhan Mutual Fund

NOTICE

Record Date for distribution under Income Distribution Cum Capital Withdrawal (IDCW) Option (previously referred as Dividend)

Notice is hereby given that the Board of Directors of Bandhan Mutual Fund Trustee Limited (Trustee to Bandhan Mutual Fund) has approved the following distribution under the IDCW option of the Scheme(s)/Plan(s), subject to availability of *distributable surplus, with the Record Date as "**Thursday, October 29, 2026.**

Scheme(s) Name	Plan(s)	Option(s)	NAV (in Rs.) Per Unit as on October 23, 2026	Quantum Proposed per unit* (in Rs.)
Bandhan Arbitrage Fund	Regular	Monthly IDCW	10.7325	0.0535
Bandhan Arbitrage Fund	Direct	Monthly IDCW	10.8048	0.0539
Bandhan Equity Savings Fund	Regular	Monthly IDCW	10.700	0.054
Bandhan Equity Savings Fund	Direct	Monthly IDCW	11.368	0.057
Bandhan Conservative Hybrid Fund (Formerly known as Bandhan Regular Savings Fund)	Regular	IDCW	10.9718	0.0550
Bandhan Conservative Hybrid Fund (Formerly known as Bandhan Regular Savings Fund)	Direct	IDCW	12.9868	0.0651
Bandhan Aggressive Hybrid Fund (Formerly known as Bandhan Hybrid Equity Fund)	Regular	IDCW	17.969	0.138
Bandhan Aggressive Hybrid Fund (Formerly known as Bandhan Hybrid Equity Fund)	Direct	IDCW	20.636	0.159

Face Value per unit is Rs. 10/-.

* TDS and other statutory levies (if any) shall be levied on the amount received by the investor.
Considering the volatile nature of markets, Trustee reserves the right to restrict the quantum of IDCW upto the per unit distributable surplus available on the Record Date in case of fall in market.

\# If in any case the Record Date falls on a non-business day, the immediately following business day shall be deemed to be the Record Date.

All investors/ beneficial owners whose names appear in the register of unit holders maintained by with Registrar and Transfer Agent/ statement of beneficial owners maintained by the depositories of the Scheme(s)/ Plan(s)/ Option(s) as on the close of the record date will be eligible to receive the IDCW so declared.

Unit holders can view the Investor Charter available on website of the Fund as well as check for any unclaimed redemptions or IDCW payments.

Pursuant to the payment of dividend, NAV of the Scheme(s)/Plan(s)/Option(s) will fall to the extent of payout and statutory levy (if any).

For **Bandhan AMC Limited**
(Investment Manager for Bandhan Mutual Fund)

Place : Mumbai
Sd/-

Date : October 26, 2026
Authorised Signatory

MUTUAL FUND INVESTMENTS ARE SUBJECT TO MARKET RISKS, READ ALL SCHEME RELATED DOCUMENTS CAREFULLY.

POONAWALLA FINCORP

POONAWALLA FINCORP LIMITED

Registered office: 201 and 202, 2nd Floor, AP81, Koregaon Park Annex, Mundhwa, Pune - 411 036, Maharashtra
Corporate Office: Unit No 2401, 24th Floor, Altimus, Dr. G.M. Bhosale Marg, Worli, Mumbai - 400 018, Maharashtra
Phone: 020 6780 8090; **CIN:** L51504PN1978PLC209007
Website: www.poonawallafincorp.com; **Email:** secretarial@poonawallafincorp.com

Special Window for Re-lodgement of Transfer Requests of Physical Shares of Poonawalla Fincorp Limited.

Pursuant to SEBI Circular No. HO/38/13/11(2)2026-MIRSD-POD/1/3750/2026 dated January 30, 2026, all Shareholders are hereby informed that a "**Special Window**" is being opened to facilitate transfer and dematerialization of physical securities which were sold/purchased prior to April 01, 2019.

This special window shall be open for a period of one year from February 05, 2026 to February 04, 2027.

The special window shall also be available for such transfer requests which were submitted earlier and were rejected/returned/not attended to due to deficiency in the documents/process/or otherwise.The securities so transferred shall be mandatorily credited to the transferee only in demat mode and shall be under lock-in for a period of one year from the date of registration of transfer. Such securities shall not be transferred/lien marked/pledged during the said lock-in period.

Applicability of Special Window:

Execution Date of Transfer Deed	Lodged for transfer before April 01, 2019?	Original Security Certificate Available?	Eligible to lodge in the current window?
Before April 01, 2019	No (it is fresh lodgement)	Yes	✓
Before April 01, 2019	Yes (it was rejected / returned earlier)	Yes	✓
Before April 01, 2019	Yes	No	×
Before April 01, 2019	No	No	×

Shareholders are encouraged to take advantage of this opportunity by furnishing the necessary documents to the Company's Registrar to an Issue and Share Transfer Agent at the address mentioned below or Company's email at secretarial@poonawallafincorp.com

MUFG Intime India Private Limited
(Formerly known as Link Intime India Private Limited)
Correspondence Office address - C-101, Embassy 247, L B S Marg, Vikhroli West, Mumbai, Maharashtra - 400 083.
Email: investor.helpdesk@in.mpms.mufg.com
Telephone No:+ 91 8108116767

Registered Office:
201 and 202, 2nd floor, AP 81,
Koregaon Park Annex, Mundhwa,
Pune - 411 036, Maharashtra.
Date : October 26, 2026

For **Poonawalla Fincorp Limited**
Sd/-
Shabnum Zaman
Company Secretary
ACS No. 13918

ಸಮಾಚಾರ ಸಣ್ಣದಲ್ಲ

ಸಿಲಿಂಡರ್ ಸ್ಫೋಟ ದಂಪತಿ ದುರ್ಮರಣ

ಬೆಂಗಳೂರು: ಸಿಲಿಂಡರ್ ಸ್ಫೋಟಗೊಂಡು ದಂಪತಿ ಸಾವನ್ನಪ್ಪಿರುವಂತಹ ಘಟನೆ ಬೆಂಗಳೂರು ಉತ್ತರ ತಾಲೂಕಿನ ಕಮ್ಮಗೊಂಡನಹಳ್ಳಿಯಲ್ಲಿ ನಡೆದಿದೆ. ಮೊದಲ ಮಹಡಿಯಲ್ಲಿ ವಾಸವಿದ್ದ ಪತ್ನಿ ನಾಗರತ್ನ(26) ಮತ್ತು ಆಕಾಶ್(32) ಮೃತ ದಂಪತಿ. ನೆಲಮಹಡಿಯ ಮಳಿಗೆಯಲ್ಲಿ ಸಿಲಿಂಡರ್ ಸ್ಫೋಟಗೊಂಡಿದ್ದು, ದಂಪತಿ ವಾಸವಿದ್ದ ಮೊದಲ ಮಹಡಿಗೂ ಬೆಂಕಿ ವ್ಯಾಪಿಸಿ ಅಗ್ನಿ ಅನಾಹುತ ಸಂಭವಿಸಿದೆ. ಗಂಗಮ್ಮಗುಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಬೆಂಗಳೂರು ಉತ್ತರ ತಾಲೂಕಿನ ಕಮ್ಮಗೊಂಡನಹಳ್ಳಿಯಲ್ಲಿ ಅ.24ರಂದು ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ನೂರಾನಿ ಮಸೀದಿ ಪಕ್ಕದಲ್ಲಿದ ನೆಲಮಹಡಿಯ ಮಳಿಗೆಯಲ್ಲಿದ್ದ ಸಿಲಿಂಡರ್‌ಗಳು ರಾತ್ರಿ ಲೀಕೇಜ್ ಆಗಿದ್ದು, 6 ಕೆ.ಜಿ ತೂಕದ 23 ಸಿಲಿಂಡರ್‌ಗಳು ಸ್ಫೋಟಗೊಂಡಿವೆ. ದಂಪತಿ ವಾಸವಿದ್ದ ಮೊದಲ ಮಹಡಿಗೂ ಬೆಂಕಿ ವ್ಯಾಪಿಸಿದೆ. ಬೆಂಕಿಗೆ ಹೆದರಿದ ದಂಪತಿ ಮನೆಯ ಬಾಗಿಲು ಕ್ಲೋಸ್ ಮಾಡಿಕೊಂಡಿದ್ದಾರೆ. ಹೀಗಾಗಿ ಹೊಗೆಯಿಂದ ಉಸಿರುಗಟ್ಟಿ ಮನೆಯ ರೂಂ ನಲ್ಲಿ ಮೃತಪಟ್ಟಿರುವ ಮಾಹಿತಿ ಲಭ್ಯವಾಗಿದೆ.

ರಿಫಂಡ್ ಸೋಗಿನಲ್ಲಿ 98 ಸಾವಿರ ವಂಚನೆ

ಬೆಂಗಳೂರು: ಆನ್‌ಲೈನ್‌ನಲ್ಲಿ ಬುಕ್ ಮಾಡಲಾಗಿದ್ದ ಮೊಸರು ಪ್ಯಾಕೆಟ್ ಸೋರಿಕೆಯಾಗಿದೆ ಎಂದು ದೂರಿದ್ದಕ್ಕೆ ಹಣ ರಿಫಂಡ್ ಮಾಡುವ ಸೋಗಿನಲ್ಲಿ ಸೈಬರ್ ಚೋರರು 98 ಸಾವಿರ ರೂಪಾಯಿ ವಂಚಿಸಿರುವ ಘಟನೆ ನಡೆದಿದೆ. ರಾಜಧಾನಿಯಲ್ಲಿ ಸೈಬರ್ ವಂಚನೆ ದಿನೇ ದಿನೇ ಹೆಚ್ಚಾಗುತ್ತಿದೆ. ವಂಚನೆಗೆ ಒಳಗಾಗದಂತೆ ಜಾಗೃತಿ ವಹಿಸಿದರೂ ವಂಚಕರು ಸಿಗುವ ಅವಕಾಶ ಬಳಸಿಕೊಂಡು ಸಾರ್ವಜನಿಕರಿಂದ ಹಣ ಲಪಟಾಯಿಸುತ್ತಿದ್ದಾರೆ. ಇದೇ ರೀತಿ ಅವಕಾಶ ಬಳಸಿಕೊಂಡು ರಿಫಂಡ್ ಮಾಡುವ ಸೋಗಿನಲ್ಲಿ 98 ಸಾವಿರ ರೂಪಾಯಿ ವಂಚಿಸಲಾಗಿದ್ದು, ಈ ಸಂಬಂಧ ನಗರದ ಕೇಂದ್ರ ವಿಭಾಗದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಸಂತ ನಗರದ ನಿವಾಸಿಯಾಗಿರುವ 56 ವರ್ಷದ ಗೃಹಿಣಿಯೊಬ್ಬರು ಅಕ್ಟೋಬರ್ 17ರಂದು ಬ್ಲಿಂಕ್ ಇಟ್ ನಲ್ಲಿ ಮೊಸರು ಆರ್ಡರ್ ಮಾಡಿದ್ದರು. ಇದರಂತೆ ಡೆಲಿವರಿ ಬಾಯ್‌ನಿಂದ ಮೊಸರು ಡೆಲಿವರಿ ಮಾಡಲಾಗಿತ್ತು. ಆರ್ಡರ್ ಪಡೆದು ನೋಡಿದಾಗ ಮೊಸರು ಪ್ಯಾಕೇಟ್ ಸೋರಿಕೆಯಾಗಿದ್ದು, ಈ ಸಂಬಂಧ ದೂರು ನೀಡಲು ಗೃಹಿಣಿ ಮುಂದಾಗಿದ್ದರು. ದೂರು ನೀಡಲು ಕಸ್ಟಮರ್ ಕೇರ್ ನಂಬರ್‌ಗಾಗಿ ಗೂಗಲ್‌ನಲ್ಲಿ ಸರ್ಚ್ ಮಾಡಿದ್ದರು. ಈ ವೇಳೆ ದೊರೆತ ನಂಬರ್‌ಗೆ ಕರೆ ಮಾಡಿದ್ದರು. ಬಳಿಕ ಅವರು ಕಳುಹಿಸಿ ಲಿಂಕ್‌ನಲ್ಲಿ ಸೋರಿಕೆಯಾದ ಮೊಸರು ಪ್ಯಾಕೇಟ್ ಫೋಟೊವನ್ನು ಮಹಿಳೆ ಅಪ್‌ಲೋಡ್ ಮಾಡಿದ್ದರು. ಅಪರಿಚಿತ ವ್ಯಕ್ತಿ ಕರೆ ಮಾಡಿ ಹಣವನ್ನು ರಿಫಂಡ್ ಮಾಡುವುದಾಗಿ ಹೇಳಿದ್ದ. ಬಳಿಕ ಗೂಗಲ್ ಪೇ ಚೆಕ್ ಮಾಡುವಂತೆ ತಿಳಿಸಿದಾಗ ಮಹಿಳೆಗೆ ಶಾಕ್ ಕಾದಿತ್ತು. ಮೊಬೈಲ್‌ನಲ್ಲಿ ಗೂಗಲ್ ಪೇ ಆ್ಯಪ್ ಕಣ್ಮರೆಯಾಗಿ ಮಹಿಳೆಯ ಬರೋಡಾ ಬ್ಯಾಂಕ್ ಖಾತೆಯಿಂದ 98 ಸಾವಿರ ಕಡಿತವಾಗಿರುವುದು ಗೊತ್ತಾಗಿದೆ ಎಂದು ಮಹಿಳೆ ದೂರು ನೀಡಿದ್ದಾರೆ. ರಿಫಂಡ್ ಸೋಗಿನಲ್ಲಿ ಅಪರಿಚಿತರು ವಂಚಿಸಿರುವುದಾಗಿ ಆರೋಪಿಸಿ ಮಹಿಳೆ ನೀಡಿದ ದೂರಿನ ಮೇರೆಗೆ ಸೆನ್ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

2025ರಲ್ಲಿ 5,459 ಅಪಘಾತ ಪ್ರಕರಣಗಳು ದಾಖಲು | ಸಾವಿನ ಸಂಖ್ಯೆ ಹೆಚ್ಚಳ, ಸಂಚಾರ ಸುರಕ್ಷತೆ ಬಗ್ಗೆ ಕಳವಳ

ನಗರದಲ್ಲಿ ರಸ್ತೆ ಅಪಘಾತ ದ್ವಿಗುಣ

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ರಸ್ತೆ ಅಪಘಾತಗಳ ಪ್ರಮಾಣ ಹೆಚ್ಚಾಗುತ್ತಿದ್ದು, 2021ರಲ್ಲಿ 3,213ರಷ್ಟಿದ್ದ ಅಪಘಾತಗಳ ಸಂಖ್ಯೆ 2025ರಲ್ಲಿ 5,459ಕ್ಕೆ ಏರಿಕೆಯಾಗಿದೆ. ಇದೇ ಅವಧಿಯಲ್ಲಿ ರಸ್ತೆ ಅಪಘಾತಗಳಿಗೆ ಬಲಿಯಾದವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿದ್ದು, ಸಂಚಾರ ಸುರಕ್ಷತೆಯ ಬಗ್ಗೆ ಕಳವಳ ಮೂಡಿಸಿದೆ.

ಬೆಂಗಳೂರು ಸಂಚಾರ ಪೊಲೀಸರ ದಾಖಲೆಗಳ ಪ್ರಕಾರ, 2021ರಲ್ಲಿ ನಗರದಲ್ಲಿ 3,213 ರಸ್ತೆ ಅಪಘಾತಗಳು ವರದಿಯಾಗಿದ್ದವು. 2022ರಲ್ಲಿ ಈ ಸಂಖ್ಯೆ 3,822ಕ್ಕೆ ಏರಿಕೆಯಾಗಿತ್ತು. 2023ರಲ್ಲಿ ಅಪಘಾತಗಳ ಸಂಖ್ಯೆ 4,974ಕ್ಕೆ ತಲುಪಿದರೆ, 2024ರಲ್ಲಿ ಸ್ವಲ್ಪ ಇಳಿಕೆಯಾಗಿ 4,769 ಅಪಘಾತಗಳು ದಾಖಲಾಗಿದ್ದವು. ಆದರೆ, 2025ರಲ್ಲಿ ಮತ್ತೆ ಏರಿಕೆ ಕಂಡುಬಂದಿದ್ದು, ಒಟ್ಟು 5,459 ಅಪಘಾತಗಳು ಸಂಭವಿಸಿವೆ. ಅಂದರೆ, 2021ಕ್ಕೆ ಹೋಲಿಸಿದರೆ 2025ರಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಸುಮಾರು ಶೇ. 70ರಷ್ಟು ಹೆಚ್ಚಾಗಿದೆ. ಅಪಘಾತಗಳ ಸಂಖ್ಯೆಯಲ್ಲಿನ ಈ ಏರಿಕೆಯೊಂದಿಗೆ ಜೀವಹಾನಿಯ ಪ್ರಮಾಣವೂ ಹೆಚ್ಚಿರುವುದು ಗಮನಾರ್ಹವಾಗಿದೆ.

2025ರಲ್ಲಿ ರಸ್ತೆ ಅಪಘಾತಗಳಿಗೆ 999 ಮಂದಿ ಬಲಿ: ನಗರದಲ್ಲಿ ರಸ್ತೆ ಅಪಘಾತಗಳಿಂದ ಸಂಭವಿಸುತ್ತಿರುವ ಸಾವುಗಳ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಏರಿಳಿತ ಕಂಡಿದ್ದರೂ, ಒಟ್ಟಾರೆ ಹೆಚ್ಚಳದ ಪ್ರವೃತ್ತಿ ಮುಂದುವರಿದಿದೆ. 2021ರಲ್ಲಿ 654 ಮಂದಿ ರಸ್ತೆ ಅಪಘಾತಗಳಲ್ಲಿ ಮೃತಪಟ್ಟಿದ್ದರು. 2022ರಲ್ಲಿ ಈ ಸಂಖ್ಯೆ 772ಕ್ಕೆ ಏರಿಕೆಯಾಗಿತ್ತು. 2023ರಲ್ಲಿ 915 ಮಂದಿ ಜೀವ

ಕಳೆದುಕೊಂಡಿದ್ದರು. 2024ರಲ್ಲಿ ಸಾವಿನ ಸಂಖ್ಯೆ 894ಕ್ಕೆ ಇಳಿದಿದ್ದರೂ, 2025ರಲ್ಲಿ ಮತ್ತೆ ಹೆಚ್ಚಳವಾಗಿ 999 ಮಂದಿ ಮೃತಪಟ್ಟಿದ್ದಾರೆ. 2021ರ ಅಂಕಿ ಅಂಶಗಳಿಗೆ ಹೋಲಿಸಿದರೆ, ಐದು ವರ್ಷಗಳ ಅವಧಿಯಲ್ಲಿ ಅಪಘಾತಗಳಿಂದ ಸಂಭವಿಸಿದ ಸಾವುಗಳ ಸಂಖ್ಯೆ ಸುಮಾರು ಶೇ.53ರಷ್ಟು ಹೆಚ್ಚಾಗಿದೆ.

ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ: ರಸ್ತೆ ಅಪಘಾತಗಳನ್ನು ನಿಯಂತ್ರಿಸುವ ಉದ್ದೇಶದಿಂದ ಬೆಂಗಳೂರು ಸಂಚಾರ ಪೊಲೀಸರು ನಿಯಮ ಉಲ್ಲಂಘಿಸುವವರ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದಾರೆ. ಮದ್ಯಪಾನ ಮಾಡಿ ವಾಹನ ಚಲಾಯಿಸುವುದು, ಹೆಲ್ಮೆಟ್ ಇಲ್ಲದೆ ದ್ವಿಚಕ್ರ ವಾಹನ ಸವಾರಿ ಮಾಡುವುದು, ಅತಿವೇಗ, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ ಮತ್ತು ಸಿಗ್ನಲ್ ಉಲ್ಲಂಘನೆ ಪ್ರಕರಣಗಳ ಮೇಲೆ ನಿಗಾ ಇರಿಸಲಾಗಿದೆ. ನಿಯಮ ಉಲ್ಲಂಘಿಸುವ ವಾಹನ ಸವಾರರ ಚಾಲನಾ ಪರವಾನಗಿಗಳನ್ನು ಅಮಾನತುಗೊಳಿಸುವಂತೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಶಿಫಾರಸು ಮಾಡಲಾಗುತ್ತಿದೆ. ಪಾದಚಾರಿ ಮಾರ್ಗಗಳಲ್ಲಿ ಅಕ್ರಮವಾಗಿ ವಾಹನಗಳನ್ನು ನಿಲುಗಡೆ ಮಾಡುವವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತಿದೆ. ಇದರ ಜತೆಗೆ, ಹೊರ ವರ್ತುಲ ರಸ್ತೆಯ ಕೆಲವು ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ವಾಹನಗಳ ವೇಗವನ್ನು ಪತ್ತೆಹಚ್ಚಲು ರಾಡಾರ್ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಈ ಮೂಲಕ ವೇಗದ ಮಿತಿ ಉಲ್ಲಂಘಿಸುವ ವಾಹನಗಳ ಮೇಲೆ ನಿಗಾ ವಹಿಸಲು ಪೊಲೀಸರು ಮುಂದಾಗಿದ್ದಾರೆ.

2026ರ ಮೊದಲ ಒಂಬತ್ತು ತಿಂಗಳಲ್ಲೇ 836 ಸಾವು

2026ರ ಜನವರಿಯಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲೇ ಬೆಂಗಳೂರಿನಲ್ಲಿ 4,702 ರಸ್ತೆ ಅಪಘಾತಗಳು ದಾಖಲಾಗಿವೆ. ಈ ಪೈಕಿ 808 ಅಪಘಾತಗಳು ಪ್ರಾಣಹಾನಿಗೆ ಕಾರಣವಾಗಿವೆ. ಒಟ್ಟು 836 ಮಂದಿ ಮೃತಪಟ್ಟಿದ್ದು, 4,111 ಮಂದಿ ಗಾಯಗೊಂಡಿದ್ದಾರೆ ನಿಮ್ಹಾನ್ಸ್, ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದ ಇಂಜುರಿ ರಿಸರ್ಚ್ ಯುನಿಟ್ ಮತ್ತು ಬೆಂಗಳೂರು ಸಂಚಾರ ಪೊಲೀಸರು ಜಂಟಿಯಾಗಿ ನಡೆಸಿದ ಅಧ್ಯಯನದಲ್ಲಿ ನಗರದ 25 ಸ್ಥಳಗಳಲ್ಲಿ ವಾಹನಗಳ ವೇಗವನ್ನು ಪರಿಶೀಲಿಸ ಲಾಗಿತ್ತು. ಈ ಅಧ್ಯಯನದ ವೇಳೆ ಗಮನಿಸಿದ ವಾಹನಗಳ ಪೈಕಿ ಶೇ. 30.6ರಷ್ಟು ವಾಹನಗಳು ನಿಗದಿಪಡಿಸಿದ ಸುರಕ್ಷಿತ ವೇಗದ ಮಿತಿಯನ್ನು ಮೀರಿದೆ.

ನೆಲಕದಿರೇನಹಳ್ಳಿಯ 59.39 ಎಕರೆ ಭೂಸ್ವಾಧೀನ ರದ್ದುಗಳಿಸಿದ ಸುಪ್ರೀಂ

ದೆಹಲಿ: ವಸತಿ ಸಹಕಾರ ಸಂಘಕ್ಕಾಗಿ 1988ರಲ್ಲಿ ಕೈಗೊಂಡಿದ್ದ ಬೆಂಗಳೂರಿನ ನೆಲಕದಿರೇನಹಳ್ಳಿಯ 59.39 ಎಕರೆ ಭೂಸ್ವಾಧೀನ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ.

ಯಲಹಂಕ ತಾಲೂಕಿನ ನೆಲಕದಿರೇನಹಳ್ಳಿಯಲ್ಲಿ 59 ಎಕರೆ 39 ಗುಂಟೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಪ್ರಕ್ರಿಯೆಯಲ್ಲಿ ವಂಚನೆ ಹಾಗೂ ಅಧಿಕಾರದ ದುರ್ಬಳಕೆ ನಡೆದಿದೆ. ಯಾವುದೇ ನಿರ್ದಿಷ್ಟ ವಸತಿ ಯೋಜನೆ ಅಥವಾ ಲೇಔಟ್‌ಗೆ ಸರಕಾರದ ಪೂರ್ವಾನುಮೋದನೆ ಇಲ್ಲದಿರುವ ಕಾರಣದಿಂದ ಈ ಭೂಸ್ವಾಧೀನ ಪ್ರಕ್ರಿಯೆಯೇ ದೋಷಪೂರಿತವಾಗಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ತಿಳಿಸಿದೆ.

ಕರ್ನಾಟಕ ಹೈಕೋರ್ಟ್‌ನ ದ್ವಿಸದಸ್ಯ ಪೀಠದ ತೀರ್ಪನ್ನು ರದ್ದುಗೊಳಿಸಿರುವ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಕೆ.ವಿನೋದ್ ಚಂದ್ರನ್ ಅವರ ಪೀಠವು, ಏಕಸದಸ್ಯ ಪೀಠದ ತೀರ್ಪನ್ನು ಎತ್ತಿ ಹಿಡಿದಿದೆ. ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಸರಕಾರವು ಸರಿಯಾದ ಸ್ವಾಧೀನ ಪ್ರಕ್ರಿಯೆ ನಡೆಸಿಲ್ಲ ಎಂದೂ ಪೀಠ ಅಭಿಪ್ರಾಯಪಟ್ಟಿದೆ.

ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ, ಭೂಮಾಲೀಕತ್ವವನ್ನು ಆಯಾ ಭೂಮಾಲೀಕರಿಗೆ ಹಿಂದಿರುಗಿಸಬೇಕೆಂದು ಪೀಠ ನಿರ್ದೇಶಿಸಿದೆ. ಸರ್ಕಾರದಿಂದ ಪರಿಹಾರ ಪಡೆದ ಭೂಮಾಲೀಕರು ಬಡ್ಡಿರಹಿತವಾಗಿ ಮೊತ್ತ ಮರುಪಾವತಿಸಬೇಕು ಎಂದು ತಿಳಿಸಿದೆ. ಭೂಮಿಯ ಸ್ವಾಧೀನವನ್ನು ಹಸ್ತಾಂತರಿಸಿದ್ದರೂ ಅಥವಾ ಹಣ ಮರುಪಾವತಿಸಿದ್ದರೂ, ಪ್ರತಿವಾದಿಯಾಗಿರುವ ಕರ್ನಾಟಕ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಆ ಭೂಮಿಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಪೀಠ ಸ್ಪಷ್ಟಪಡಿಸಿ, ಸಂಘವೇ ವಂಚನೆಗೆ ಸಹಕರಿಸಿದೆ ಎಂಬುದನ್ನು ಪೀಠ ಗಮನಿಸಿದೆ.

ಭೂಮಾಲೀಕರು ಸರಕಾರ ನೀಡಿದ ಪರಿಹಾರ ಹಿಂತಿರುಗಿಸಲು ಅಸಮರ್ಥರಾಗಿದ್ದಾಗ ಅಥವಾ ಹಿಂತಿರುಗಿಸಲು ಇಚ್ಚಿಸದಿದ್ದಾಗ, ಅಂತಹ ಜಮೀನುಗಳನ್ನು ಸರಕಾರವು ಹರಾಜು ಹಾಕಬೇಕು. ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲ್ವಿಚಾರಣೆಯಲ್ಲಿ, ಈ ಮೊತ್ತವನ್ನು ಸಂತ್ರಸ್ತರಿಗೆ ಪರಿಹಾರ ನೀಡಲು ಬಳಸಲಾಗುತ್ತದೆ ಎಂದು ಪೀಠ ಆದೇಶಿಸಿದೆ.

ಜಿಲ್ಲಾ ನ್ಯಾಯಾಧೀಶರ (ಆಯ್ಕೆ ಶ್ರೇಣಿ) ಶ್ರೇಣಿಯ ನ್ಯಾಯಾಂಗ ಅಧಿಕಾರಿಯೊಬ್ಬರ ಮೇಲ್ವಿಚಾರಣೆಯಲ್ಲಿ, ಕಂದಾಯ ಅಧಿಕಾರಿಗಳು ಹರಾಜು ಪ್ರಕ್ರಿಯೆ ನಡೆಸಬೇಕು. ಏಕಸದಸ್ಯ ಪೀಠವು ವಿಧಿಸಿದ್ದ ವೆಚ್ಚವನ್ನು ನ್ಯಾಯಪೀಠ ಹೆಚ್ಚಿಸಿದ್ದು, ಪ್ರತಿ ಅರ್ಜಿದಾರರಿಗೆ ತಲಾ 50,000 ರು.ಪಾವತಿಸುವಂತೆ ಆದೇಶಿಸಿದೆ. ದೀರ್ಘಕಾಲ ಆಗಿರುವುದನ್ನು ಪರಿಗಣಿಸಿ, ಸರಕಾರಿ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆಗಳನ್ನು ಪೀಠ ರದ್ದುಗೊಳಿಸಿದೆ. ಎನ್.ನರಸಪ್ಪ ಮತ್ತು ಇತರರು ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಪೀಠವು 71 ಪುಟಗಳ ತೀರ್ಪು ನೀಡಿದೆ. ಸಂಘದ ಅನುಮಾನಾಸ್ಪದ ನಿಯಮಾವಳಿ, ಸದಸ್ಯತ್ವದ ಬಗೆಗಿನ ಸ್ಪಷ್ಟ ವಿವರಗಳ ಕೊರತೆ, ಮಧ್ಯವರ್ತಿಗಳ ಒಳಗೊಳ್ಳುವಿಕೆ ಹಾಗೂ ಭೂಸ್ವಾಧೀನಕ್ಕೂ ಮೊದಲೇ ಲೇಔಟ್ ರಚನೆಗಾಗಿ ಖಾಸಗಿ ವ್ಯಕ್ತಿಗಳೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಪೀಠ ಗಮನಿಸಿದೆ.

ಅ.31ರಿಂದ ಸ್ಪಿರಿಟ್ ಆಫ್ ಯುನಿಟಿ ಸಂಗೀತೋತ್ಸವ

ಬೆಂಗಳೂರು: ಸ್ವರ ಫೌಂಡೇಷನ್ ಮತ್ತು ಬಸವ ಸಮಿತಿ ಸಂಯುಕ್ತವಾಗಿ ಆಯೋಜಿಸಿರುವ ಸ್ಪಿರಿಟ್ ಆಫ್ ಯುನಿಟಿ ಸಂಗೀತೋತ್ಸವ ಅ.31 ಮತ್ತು ನ.1ರಂದು ನಗರದ ಬಸವ ಸಮಿತಿಯ ಅನುಭವ ಮಂಟಪದಲ್ಲಿ ನಡೆಯಲಿದೆ.

ಅ.31ರಂದು ಸಂಜೆ 5.30ಕ್ಕೆ ಭಾರತರತ್ನ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಮರಿಮೊಮ್ಮಕ್ಕಳಾದ ಎಸ್.ಐಶ್ವರ್ಯ ಮತ್ತು ಎಸ್. ಸೌಂದರ್ಯ ಅವರ ಕರ್ನಾಟಕ ಸಂಗೀತ ಗಾಯನದೊಂದಿಗೆ ಉತ್ಸವ ಆರಂಭ ವಾಗಲಿದೆ. ಬಳಿಕ ಖ್ಯಾತ ಹಿಂದೂಸ್ತಾನಿ ಗಾಯಕ ಪಂ. ವಿನಾಯಕ ತೊರವಿ ಗಾಯನ ಪ್ರಸ್ತುತಪಡಿಸಲಿದ್ದಾರೆ. ನ.1ರಂದು ಬೆಳಗ್ಗೆ 9ಕ್ಕೆ ಉಸ್ತಾದ್ ರೈಸ್ ಮತ್ತು ಉಸ್ತಾದ್ ಹಫೀಸ್ ಬಾಲೇಖಾನ್ ಅವರ ಸಿತಾರ್ ಜುಗಲ್‌ಬಂದಿ ನಡೆಯಲಿದೆ. ನಂತರ ಸ್ವರ ಫೌಂಡೇಷನ್ ಸಂಸ್ಥಾಪಕ, ನಿವೃತ್ತ ಐಎಎಸ್ ಅಧಿಕಾರಿ ಡಾ. ಮುದ್ದುಮೋಹನ್ ಅವರ ಹಿಂದೂಸ್ತಾನಿ ಗಾಯನ ಹಾಗೂ ದಿವಂಗತ ಪಂ. ಕುಮಾರ ಗಂಧರ್ವ ಅವರ ಮೊಮ್ಮಗ, ಇಂದೋರ್‌ನ ಭುವನೇಶ್ ಕೋಮಕಾಳಿ ಅವರ ಗಾಯನ ಕಾರ್ಯಕ್ರಮ ನಡೆಯಲಿದೆ. ಎರಡೂ ದಿನಗಳ ಸಂಗೀತ ಕಾರ್ಯಕ್ರಮಗಳಿಗೆ ಪಂ. ಗುರುಮೂರ್ತಿ ವೈದ್ಯ, ಪಂ. ಉದಯರಾಜ ಕರ್ಪೂರ, ಪಂ. ವ್ಯಾಸಮೂರ್ತಿ ಕಟ್ಟಿ, ಪಂ. ರವೀಂದ್ರ ಕಾಟೋಟಿ, ರೂಪಕ್ ಕಲ್ಲೂರ್‌ಕರ್, ಚಿದಂಬರ ಜೋಶಿ, ಎಸ್. ಜನಾರ್ಧನ ಮತ್ತು ನಿಕ್ಷಿತ್ ಪುತ್ತೂರು ಪಕ್ಕವಾದ್ಯದಲ್ಲಿ ಸಹಕರಿಸಲಿದ್ದಾರೆ. ಸಂಗೀತಾಸಕ್ತರಿಗೆ ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ ಎಂದು ಡಾ. ಮುದ್ದುಮೋಹನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧನ್ವೀರ್: ಎನ್‌ಎಸ್‌ಯುಐ ದೂರು

ಬೆಂಗಳೂರು: ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ಮತ್ತು ನಟ ಧನ್ವೀರ್ ಗೌಡ ನಡುವಿನ ಕೋಲ್ಡ್ ವಾರ್ ಈಗ ಮತ್ತೊಂದು ಮಜಲನ್ನು ಪಡೆದುಕೊಂಡಿದೆ. ಸಿಎಂ ಡಿ.ಕೆ ಶಿವಕುಮಾರ್ ಹಾಗೂ ಸಚಿವ ಝಮೀರ್ ಅಹ್ಮದ್ ಖಾನ್ ಅವರ ಪುತ್ರ ಝೈದ್ ಖಾನ್ ಬಗ್ಗೆ ನಟ ಧನ್ವೀರ್ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಎನ್‌ಎಸ್‌ಯುಐ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿಗೆ ದೂರು ನೀಡಿದೆ. ಮತ್ತೊಂದೆಡೆ ಜಮೀರ್ ಅಭಿಮಾನಿಗಳು, ಚನ್ನಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ಧನ್ವೀರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜಮೀರ್ ಅಹ್ಮದ್ ಖಾನ್ ಪುತ್ರ ಝೈದ್ ಖಾನ್ ಬಗ್ಗೆ ಧನ್ವೀರ್ ಹಗುರವಾಗಿ ಮಾತನಾಡಿದ್ದಾರೆ ಎಂದು ಆರೋಪಿಸ ಚನ್ನಪಟ್ಟಣ ನಗರ ಠಾಣೆಗೆ ದೂರು ನೀಡಿದೆ.

ಸ್ಟಿಂಗ್‌ಗೆ ಚಿನ್ನದ ಬ್ರೆಸ್ಲೆಟ್ ನಂಟು

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್ ಪ್ರಕರಣದಲ್ಲಿ ಶಂಕಿತನಿಗೆ ನೋಟಿಸ್ ನೀಡಲು ತೆರಳಿದ್ದ ಇನ್‌ಪೆಕ್ಟರ್ ಚಿನ್ನದ ಬ್ರೆಸ್ಲೆಟ್ ನಾಪತ್ತೆಯಾದ ಘಟನೆ ನಡೆದಿದೆ.

ಅ.23ರಂದು ಜೆಡಿಎಸ್ ಕಾರ್ಯಕರ್ತ ಮೋಹನ್ ಗೌಡ ಅವರ ಭರತ್ ನಗರದಲ್ಲಿರುವ ನಿವಾಸಕ್ಕೆ ತೆರಳಿದ್ದಾಗ ತಮ್ಮ ಬ್ರೆಸ್ಲೆಟ್ ಕಳೆದಿದೆ ಎಂದು ಆರೋಪಿಸಿ ಇನ್‌ಸ್ಪೆಕ್ಟರ್ ಕವಿತಾ ಜಿ.ಎಂ ಅವರು ಬ್ಯಾಡರಹಳ್ಳಿ ಠಾಣೆಗೆ ದೂರು ನೀಡಿದ್ದಾರೆ. ಸಿಬ್ಬಂದಿ ಶೋಧ ಕಾರ್ಯಾಚರಣೆ ನಡೆಸುವಾಗ ಮೋಹನ್ ಗೌಡ ಅವರ ಪತ್ನಿ ಪವಿತ್ರಾ ಮತ್ತು ಅವರ ಮತ್ತೊಬ್ಬ ಸ್ನೇಹಿತೆ ಪವಿತ್ರಾ ಇಬ್ಬರೂ ಸೇರಿ ಅಧಿಕಾರಿಗಳ ಕರ್ತವ್ಯಕ್ಕೆ ತೀವ್ರ ಅಡ್ಡಿಪಡಿಸಿದ್ದರು. ಅದೇ ಸಂದರ್ಭದಲ್ಲಿ ಬ್ರೆಸ್ಲೆಟ್ ಕಳೆದಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಅದರ ಅನ್ವಯ ಮೋಹನ್ ಗೌಡ ಅವರ ಪತ್ನಿ ಪವಿತ್ರಾ ಹಾಗೂ ಅವರ ಸ್ನೇಹಿತೆ ಪವಿತ್ರಾ ವಿರುದ್ಧ ಪ್ರಕರಣ ದಾಖಲಾಗಿದೆ. ತನಿಖಾಧಿಕಾರಿಗಳ ತಂಡ ಅ. 23ರಂದು ಸಂಜೆ ವಾರಂಟ್‌ನೊಂದಿಗೆ ಮೋಹನ್ ಗೌಡ ಅವರ ನಿವಾಸಕ್ಕೆ ತೆರಳಿತ್ತು. ಆ ಸಂದರ್ಭದಲ್ಲಿ ತಪಾಸಣೆಗಾಗಿ ಮೊಬೈಲ್ ಫೋನ್ ಕೇಳಿದಾಗ ಪವಿತ್ರಾ ಅವರು ನೀಡಲು ನಿರಾಕರಿಸಿದ್ದಾರೆ. ಆಗ ಮೊಬೈಲ್ ಅನ್ನು ವಶಕ್ಕೆ ಪಡೆಯಲು ಮುಂದಾದಾಗ, ಇಬ್ಬರ ನಡುವೆ ಎಳೆದಾಟ ನಡೆದಿದೆ.

ಘರ್ಷಣೆಯ ಸಮಯದಲ್ಲಿ ಇನ್‌ಸ್ಪೆಕ್ಟರ್ ಕೈಯಲ್ಲಿದ್ದ ಸುಮಾರು 9 ಗ್ರಾಂ ತೂಕದ ಚಿನ್ನದ ಬ್ರಾಸ್ಲೆಟ್ ಕಟ್ ಆಗಿ ರೂಮ್‌ನ ಬೆಡ್ ಮೇಲೆ ಬಿದ್ದಿತ್ತು. ಆದರೆ ಆ ಗದ್ದಲದಲ್ಲಿ ಇದನ್ನು ಗಮನಿಸದ ಇನ್‌ಸ್ಪೆಕ್ಟರ್ ಕವಿತಾ ಅವರು ಶೋಧ ಮುಗಿಸಿ ವಾಪಸ್ ಠಾಣೆಗೆ ತೆರಳಿದ್ದಾರೆ. ಬಳಿಕ ತಮ್ಮ ಕೈಯಲ್ಲಿದ್ದ ಚಿನ್ನದ ಬ್ರೆಸ್ಲೆಟ್ ಮಿಸ್ ಆಗಿರುವುದು ಕವಿತಾ ಅವರ ಗಮನಕ್ಕೆ ಬಂದಿದೆ. ಕೂಡಲೇ ಅವರು ಮನೆಯಲ್ಲಿ ಶೋಧ ನಡೆಸುವಾಗ ಮಾಡಲಾದ ವಿಡಿಯೋ ರೆಕಾರ್ಡ್ ಪರಿಶೀಲಿಸಿದಾಗ, ಬ್ರೆಸ್ಲೆಟ್ ಬೆಡ್ ಮೇಲೆ ಬಿದ್ದಿರುವುದು ಸ್ಪಷ್ಟವಾಗಿದೆ. ತಕ್ಷಣವೇ ಅವರು ಪವಿತ್ರಾ ಅವರ ಮನೆಗೆ ತೆರಳಿ ಈ ಬಗ್ಗೆ ವಿಚಾರಿಸಿದರೂ, ನಮಗೆ ಯಾವುದೇ ಬ್ರೆಸ್ಲೆಟ್ ಬಗ್ಗೆ ಗೊತ್ತಿಲ್ಲ ಎಂದು ಹಾರಿಕೆಯ ಉತ್ತರ ನೀಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಸದ್ಯ ಈ ದೂರಿನನ್ವಯ ಕರ್ತವ್ಯಕ್ಕೆ ಅಡ್ಡಿಪಡಿಸಿ, ಹಲ್ಲೆ ನಡೆಸಿ ಹಾಗೂ ಬ್ರೆಸ್ಲೆಟ್ ಹಿಂದಿರುಗಿಸದ ಆರೋಪದಡಿ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಿಯತಮೆ ದೂರಾಗಿದ್ದಕ್ಕೆ ಸ್ಕೂಟರ್‌ಗೆ ಬೆಂಕಿ ಹಚ್ಚಿ ಪಾಗಲ್ ಪ್ರೇಮಿ ವಿಕೃತಿ

ಬೆಂಗಳೂರು: ಪ್ರಿಯತಮೆ ದೂರವಾಗಿದ್ದಕ್ಕೆ ಆಕ್ರೋಶಗೊಂಡ ಯುವಕನೊಬ್ಬ ಆಕೆಯ ಸಂಬಂಧಿಕರ ಮನೆ ಮುಂದಿದ್ದ ದ್ವಿಚಕ್ರ ವಾಹನಕ್ಕೆ ಬೆಂಕಿಯಿಟ್ಟ ಘಟನೆ ಕೋಣನಕುಂಟೆ ಠಾಣೆ ವ್ಯಾಪ್ತಿಯ ಬೀರೇಶ್ವರ ನಗರದಲ್ಲಿ ನಡೆದಿದೆ.

ನಂದನ್ ಎಂಬ ಆರೋಪಿಯ ಕೃತ್ಯದಿಂದ ಒಂದು ದ್ವಿಚಕ್ರ ವಾಹನ ಸಂಪೂರ್ಣ ಸುಟ್ಟು ಕರಕಲಾಗಿದೆ. ಮತ್ತೊಂದು ದ್ವಿಚಕ್ರ ವಾಹನಕ್ಕೆ ಭಾಗಶಃ ಹಾನಿಯಾಗಿದೆ. ಘಟನೆಗೆ ಸಂಬಂಧಿಸಿದಂತೆ ಯುವತಿಯ ಸಂಬಂಧಿ ಸುನೀಲ್ ಎನ್. ನೀಡಿದ ದೂರಿನನ್ವಯ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದೂರುದಾರ ಸುನಿಲ್ ಅವರ ಸಂಬಂಧಿ ಯುವತಿ ಅವರ ಮನೆಯಲ್ಲಿ ವಾಸವಿದ್ದಳು. ಆ ಯುವತಿ ಹಾಗೂ ನಂದನ್ ಪರಸ್ಪರ ಪ್ರೀತಿಸುತ್ತಿದ್ದರು. ಕೆಲ ತಿಂಗಳಿಂದ ಕಾರಣಾಂತರಗಳಿಂದ ನಂದನ್‌ನಿಂದ ಯುವತಿ ದೂರವಾಗಿದ್ದಳು. ಅದನ್ನ ಸಹಿಸದ ನಂದನ್ ಅಕ್ಟೋಬರ್ 19ರಂದು ರಾತ್ರಿ ಆಕೆ ವಾಸವಿದ್ದ ಸುನಿಲ್ ಅವರ ಮನೆ ಬಳಿ ಬಂದು ಮಾತನಾಡಲು ಹೊರಗೆ ಬರುವಂತೆ ಗಲಾಟೆ ಮಾಡಿದ್ದ. ಆರೋಪಿಯ ಈ ವರ್ತನೆಯಿಂದ ತೀವ್ರ ಭಯಗೊಂಡ ಮನೆಯವರು ಬಾಗಿಲು ತೆರೆದಿರಲಿಲ್ಲ. ಇದರಿಂದ ಮತ್ತಷ್ಟು ರೊಚ್ಚಿಗೆದ್ದ ಆರೋಪಿ, ಮನೆ ಮುಂದೆ ನಿಲ್ಲಿಸಿದ್ದ ಸುನೀಲ್ ಅವರ ಸ್ಕೂಟರ್‌ಗೆ ಬೆಂಕಿ ಹಚ್ಚಿದ್ದಾನೆ. ಈ ಕೃತ್ಯದಿಂದಾಗಿ ಸ್ಕೂಟರ್ ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ಅದರ ಪಕ್ಕದಲ್ಲೇ ನಿಲ್ಲಿಸಿದ್ದ ಮತ್ತೊಂದು ಸ್ಕೂಟರ್‌ಗೂ ಹಾನಿಯಾಗಿದೆ. ಸದ್ಯ ಎನ್‌ಸಿಆರ್ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ವೃದ್ಧೆಯ ಹತ್ಯೆಗೈದು ಮನೆಗಳ್ಳತನ

ಬೆಂಗಳೂರು: ಒಂಟಿಯಾಗಿ ವಾಸಿಸುತ್ತಿದ್ದ ವೃದ್ಧೆಯನ್ನು ಹತ್ಯೆಗೈದು ಮನೆಯಲ್ಲಿದ್ದ ಚಿನ್ನಾಭರಣ ದೋಚಿರುವ ಘಟನೆ ಬೆಂಗಳೂರಿನಲ್ಲಿ ವರದಿಯಾಗಿದೆ.

ಅ.24ರಂದು ಹೊಸಗುಡ್ಡದಹಳ್ಳಿಯಲ್ಲಿ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ವೆಂಕಟಲಕ್ಷ್ಮಮ್ಮ (70) ಎಂಬವರ ತಲೆ ಹಾಗೂ ಕತ್ತಿಗೆ ಬಲವಾಗಿ ಹಲ್ಲೆ ಮಾಡಿ ಕೊಲೆ ಮಾಡಲಾಗಿದೆ. ಘಟನಾ ಸ್ಥಳಕ್ಕೆ ಬ್ಯಾಟರಾಯನಪುರ ಠಾಣೆ ಪೊಲೀಸರು ಭೇಟಿ ನೀಡಿದ್ದು, ಹಂತಕನಿಗಾಗಿ ಹುಡುಕಾಟ ಆರಂಭಿಸಿರುವುದಾಗಿ ತಿಳಿಸಿದ್ದಾರೆ. ಸ್ಥಳೀಯರ ಮಾಹಿತಿಯ ಪ್ರಕಾರ, ಪತಿಯ ನಿಧನದ ಬಳಿಕ ವೆಂಕಟಲಕ್ಷ್ಮಮ್ಮ ಒಂಟಿಯಾಗಿ ವಾಸಿಸುತ್ತಿದ್ದರು. ಹೊಸಗುಡ್ಡದಹಳ್ಳಿಯಲ್ಲಿ ಒಟ್ಟು ನಾಲ್ಕು ಮನೆಗಳನ್ನು ಹೊಂದಿದ್ದ ವೆಂಕಟ ಲಕ್ಷ್ಮಮ್ಮ, ಒಂದು ಮನೆಯಲ್ಲಿ ತಾವೇ ವಾಸವಿದ್ದರು. ಉಳಿದ ಎರಡು ಮನೆಗಳು ಖಾಲಿ ಇದ್ದವು. ಮತ್ತೊಂದು ಮನೆಯನ್ನು ಯುವಕನೊಬ್ಬ ಬಾಡಿಗೆಗೆ ಪಡೆದುಕೊಂಡು, ಅಲ್ಲಿ ಸೌಂಡ್ ಸಿಸ್ಟಮ್‌ಗಳನ್ನು ಸ್ಟೋರ್ ಮಾಡುವ ಮೂಲಕ ಗೋದಾಮು ರೀತಿಯಾಗಿ ಬಳಸಿಕೊಳ್ಳುತ್ತಿದ್ದ. ಬಾಡಿಗೆ ಪಡೆದಿದ್ದ ಯುವಕನೇ ವೃದ್ಧೆಗೆ ತಿಂಗಳಿಗೊಮ್ಮೆ ಬಾಡಿಗೆ ಹಣದ ಜತೆಗೆ ಅಗತ್ಯವಿರುವ ಮಾತ್ರೆಗಳನ್ನು ತಂದುಕೊಡುತ್ತಿದ್ದ ಎಂದು ತಿಳಿದು ಬಂದಿದೆ.ವೃದ್ಧೆಯ ತಲೆ ಹಾಗೂ ಕತ್ತಿನ ಭಾಗಕ್ಕೆ ಬಲವಾದ ಪೆಟ್ಟು ನೀಡಿ ಹಲ್ಲೆ ನಡೆಸಲಾಗಿದ್ದು, ತಲೆ, ಕತ್ತಿನ ಭಾಗದಲ್ಲಿ ಗಂಭೀರ ಗಾಯವಾಗಿ ವೃದ್ಧೆ ಪ್ರಾಣ ಬಿಟ್ಟಿದ್ದಾರೆ. ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

AEQUS
ecosystems of efficiency

AEQUS LIMITED

(Formerly known as Aequs Private Limited)

CIN: L30305KA2000PLC026760

Registered Office: Aequs Tower, No. 55, Whitefield Main Road, Mahadevapura Post, Bengaluru, Karnataka, India - 560048

E-mail: investor.relations@aequs.com, Website: www.aequs.com

STATEMENT OF UNAUDITED FINANCIAL RESULTS (STANDALONE AND CONSOLIDATED) FOR THE QUARTER AND HALF YEAR ENDED SEPTEMBER 30, 2026

The Board of Directors of Aequs Limited ("the Company") at the meeting held on October 26, 2026, approved the Unaudited Financial Results (Standalone and Consolidated) of the Company for the Quarter and Half year ended September 30, 2026 ("Financial Results").

The Financial Results along with the Limited Review Report, are available on the Company's website at https://www.aequs.com/wp-content/uploads/2026/10/Financial-Results-September-30-2026.pdf. and on the websites of National Stock Exchange of India Limited and BSE Limited ("Stock Exchanges") and can be accessed by scanning the QR code.

For and on behalf of the Board of Directors
Aequs Limited
Sd/-
Rajeev Kaul
Co-Founder & Managing Director
DIN:01468590

Date: October 26, 2026
Place: Belagavi, Karnataka

Note: The above information is in accordance with Regulation 33 read with Regulation 47 (1) of the SEBI (Listing Obligations and Disclosure Requirements) Regulations, 2015

ATHER

ಎಥರ್ ಎನರ್ಜಿ ಲಿಮಿಟೆಡ್

(ಈ ಹಿಂದೆ ಎಥರ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಕಾರ್ಪೊರೇಟ್ ಗುರುತಿನ ಸಂಖ್ಯೆ (CIN): L40100KA2013PLC093769

ನೊಂದಾಯಿತ ಕಚೇರಿ: 3ನೇ ಮಹಡಿ, ಟವರ್ ಡಿ, ಐಬಿಸಿ ನಾಲೆಡ್ಜ್ ಪಾರ್ಕ್, #4/1, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು – 560 029, ಕರ್ನಾಟಕ, ಭಾರತ

ಫೋನ್: +91 80 6646 5750, **ವೆಬ್‌ಸೈಟ್:** www.atherenergy.com, **ಇಮೇಲ್:** cs@atherenergy.com

ಸೆಪ್ಟೆಂಬರ್ 30, 2026 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧವಾರ್ಷಿಕದ ಲೆಕ್ಕಪರಿಶೋಧನೆಗೆ ಒಳಪಡದ ಪ್ರತ್ಯೇಕ ಮತ್ತು ಕ್ರೋಢೀಕೃತ ಹಣಕಾಸು ಫಲಿತಾಂಶಗಳು

ಎಥರ್ ಎನರ್ಜಿ ಲಿಮಿಟೆಡ್ (''ಕಂಪನಿ'') ನ ನಿರ್ದೇಶಕರ ಮಂಡಳಿಯು ಅಕ್ಟೋಬರ್ 26, 2026 ರಂದು ನಡೆದ ಸಭೆಯಲ್ಲಿ, ಸೆಪ್ಟೆಂಬರ್ 30, 2026 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧವಾರ್ಷಿಕದ ಕಂಪನಿಯ ಲೆಕ್ಕಪರಿಶೋಧನೆಗೆ ಒಳಪಡದ ಪ್ರತ್ಯೇಕ (Standalone) ಮತ್ತು ಕ್ರೋಢೀಕೃತ (Consolidated) ಹಣಕಾಸು ಫಲಿತಾಂಶಗಳನ್ನು (**''ಫಲಿತಾಂಶಗಳು''**) ಅನುಮೋದಿಸಿದೆ.

ಶಾಸನಬದ್ಧ ಲೆಕ್ಕ ಪರಿಶೋಧಕರ ಸೀಮಿತ ಪರಿಶೀಲನಾ ವರದಿಯೊಂದಿಗೆ (Limited Review Report) ಸಂಪೂರ್ಣ ಫಲಿತಾಂಶಗಳನ್ನು ಷೇರು ವಿನಿಮಯ ಕೇಂದ್ರಗಳ (Stock Exchange) ವೆಬ್‌ಸೈಟ್‌ಗಳಲ್ಲಿ (www.bseindia.com ಮತ್ತು www.nseindia.com) ಹಾಗೂ ಕಂಪನಿಯ ವೆಬ್‌ಸೈಟ್‌ನಲ್ಲಿ https://www.atherenergy.com/investor-relations/financials#quarterly-financial-results ನಲ್ಲಿ ಪ್ರಕಟಿಸಲಾಗಿದೆ ಮತ್ತು ಕ್ಯೂಆರ್ ಕೋಡ್ (QR Code) ಸ್ಕ್ಯಾನ್ ಮಾಡುವ ಮೂಲಕ ವೀಕ್ಷಿಸಬಹುದು.

ಮಂಡಳಿ ನಿರ್ದೇಶಕರ ಪರವಾಗಿ
ಎಥರ್ ಎನರ್ಜಿ ಲಿಮಿಟೆಡ್
ಸಹಿ/-
ತರುಣ್ ಸಂಜಯ್ ಮೆಹ್ತಾ
ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
DIN: 06392463

ಸ್ಥಳ: ಬೆಂಗಳೂರು, ಕರ್ನಾಟಕ
ದಿನಾಂಕ: ಅಕ್ಟೋಬರ್ 26, 2026

ಸೂಚನೆ: ಮೇಲಿನ ಮಾಹಿತಿಯು SEBI (ಲಿಸ್ಟಿಂಗ್ ಒಬ್ಲಿಗೇಷನ್ ಅಂಡ ಡಿಸ್‌ಕ್ಲೋರ್ಷ ರಿಕ್ವೈರ್‌ಮೆಂಟ್) ರೆಗ್ಯುಲೇಷನ್ಸ್, 2015ರ ನಿಯಮ 47(1) ರೊಂದಿಗೆ ಓದಲ್ಪಟ್ಟ ನಿಯಮ 33ರ ಪ್ರಕಾರವಾಗಿದೆ.

ಜ.23, 24ಕ್ಕೆ ಬಬ್ಬೂರುಕಮ್ಮೆ ಸಮುದಾಯದ ಸಮ್ಮೇಳನ

ಬೆಂಗಳೂರು: ಬಬ್ಬೂರುಕಮ್ಮೆ ಸಮುದಾಯದ ಪ್ರಪ್ರಥಮ ರಾಜ್ಯ ಸಮ್ಮೇಳನವನ್ನು ಬಬ್ಬೂರುಕಮ್ಮೆ ಸೇವಾ ಸಮಿತಿಯ ನೇತೃತ್ವದಲ್ಲಿ 2027ರ ಜ.23 ಮತ್ತು 24ರಂದು ಶಿವಮೊಗ್ಗದಲ್ಲಿ ಆಯೋಜಿಸಲಾಗುವುದು ಸಮಿತಿಯ ಅಧ್ಯಕ್ಷ ಡಾ. ಎ.ವಿ. ಪ್ರಸನ್ನ ತಿಳಿಸಿದರು.

ನಗರದಲ್ಲಿ ನಡೆದ ಸಮಿತಿಯ ವಾರ್ಷಿಕ ಸರ್ವಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಿವಮೊಗ್ಗ, ಮಂಡ್ಯ, ಚಿಕ್ಕಮಗಳೂರು, ಮೈಸೂರು ಮತ್ತು ಹಾಸನ ಸೇರಿದಂತೆ ಹಲವು ಜಿಲ್ಲೆಗಳ ಸಂಘಗಳು ಈಗಾಗಲೇ ಸಮ್ಮೇಳನದ ಸಿದ್ಧತೆ ಆರಂಭಿಸಿವೆ. ಸಮಿತಿಯಿಂದ ಅಗತ್ಯ ನೆರವು ನೀಡಲಾಗುವುದು ಎಂದರು.

ಬೈಲಾ ತಿದ್ದುಪಡಿಗೆ ಭರವಸೆ: ಸಮಿತಿಯ ಆಡಳಿತದ ಕುರಿತು ಸದಸ್ಯರು ವ್ಯಕ್ತಪಡಿಸಿದ ಆಕ್ಷೇಪಗಳಿಗೆ ಪ್ರತಿಕ್ರಿಯಿಸಿದ ಅವರು, ಬಹುಸದಸ್ಯರ ಒತ್ತಾಯದ

ಮೇರೆಗೆ 16 ವರ್ಷಗಳಷ್ಟು ಹಳೆಯ ಬೈಲಾ ತಿದ್ದುಪಡಿಗೆ ಶೀಘ್ರ ಚಾಲನೆ ನೀಡಲಾಗುವುದು. ಬಾಡಿಗೆದಾರರಿಗೆ 6.44 ಕೋಟಿ ರು. ಬಾಡಿಗೆ ಕಡಿತಗೊಳಿಸಿದ ಹಿನ್ನೆಲೆಯಲ್ಲಿ ಮೂಲ ದಾಖಲೆಗಳಿಗೆ ಅಗತ್ಯ ತಿದ್ದುಪಡಿ ಮಾಡಿ ನೋಂದಣಿ ಮಾಡಿಸದಿರುವ ವಿಚಾರವನ್ನು ಒಪ್ಪಿಕೊಂಡ ಅವರು, ಈ ಲೋಪವನ್ನು ಕೂಡಲೇ ಸರಿಪಡಿಸಲಾಗುವುದು ಎಂದರು.

ಸಭೆಯಲ್ಲಿ ಲೆಕ್ಕಪತ್ರಗಳ ನಿರ್ವಹಣೆ, ಕಟ್ಟಡದ ನಿರ್ವಹಣೆ, ತೆರಿಗೆ ಪಾವತಿ ಮತ್ತು ಬಾಡಿಗೆ ನಿಗದಿ ವಿಚಾರವಾಗಿ ಸದಸ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸಂಸ್ಥೆಯ ಕಾರ್ಯದರ್ಶಿಗಳು ಕಳೆದ 14 ವರ್ಷಗಳಿಂದ ಹುದ್ದೆಯಲ್ಲಿದ್ದು, ನಿರ್ದೇಶಕರಿಗೂ ಸೂಕ್ತ ಮಾಹಿತಿ ನೀಡದೆ ಏಕಪಕ್ಷೀಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿದ ಸದಸ್ಯರು, ಕಾರ್ಯದರ್ಶಿಗಳು ಹುದ್ದೆಯಿಂದ ಕೆಳಗಿಳಿಯಬೇಕು ಎಂದು ಒತ್ತಾಯಿಸಿದರು.

ರಸ್ತೆ ಅಭಿವೃದ್ಧಿಗೆ ವೇಗ ನೀಡಿ, ಸಂಚಾರ ದಟ್ಟಣೆ ನಿವಾರಿಸಿ: ಅಧಿಕಾರಿಗಳಿಗೆ ಕೃಷ್ಣ ಬೈರೇಗೌಡ ಸೂಚನೆ

ಡ್ರೈನೇಜ್ ಸುಧಾರಣೆ, ಪಾದಚಾರಿ ರಸ್ತೆ ವಿಸ್ತರಣೆ ಆಗಲಿ

ಬೆಂಗಳೂರು: ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡಿ, ಸಂಚಾರ ದಟ್ಟಣೆ ನಿವಾರಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ರಸ್ತೆ ಅಭಿವೃದ್ಧಿಯೊಂದಿಗೆ ಒಳಚರಂಡಿ ವ್ಯವಸ್ಥೆ, ಪಾದಚಾರಿ ಮಾರ್ಗ ಹಾಗೂ ಇತರ ಮೂಲಸೌಕರ್ಯ ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆಯ ಜಂಕ್ಷನ್‌ನಿಂದ ಗೆದ್ದಲಹಳ್ಳಿವರೆಗಿನ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲಿಸಿ ನಂತರ ಮಾತನಾಡಿ, ವಾಹನಗಳ ಸುಗಮ ಸಂಚಾರದ ಜತೆಗೆ ಪಾದಚಾರಿಗಳ ಸುರಕ್ಷತೆಗೂ ಆದ್ಯತೆ ನೀಡಬೇಕು. ರಸ್ತೆಯಲ್ಲಿನ ಡ್ರೈನೇಜ್ ವ್ಯವಸ್ಥೆ ಸಮರ್ಪಕವಾಗಿ ನಿರ್ವಹಿಸಿ, ಮಳೆನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳಬೇಕು. ನೀರು ನಿಲ್ಲುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗದಂತೆ ಅಗತ್ಯ ದುರಸ್ತಿ ಮತ್ತು ಸುಧಾರಣಾ ಕಾಮಗಾರಿ ಕೈಗೊಳ್ಳಬೇಕು. ಲಭ್ಯವಿರುವ ಜಾಗ ಪರಿಶೀಲಿಸಿ ಪಾದಚಾರಿ ಮಾರ್ಗಗಳನ್ನು ವಿಸ್ತರಿಸುವುದರ ಜತೆಗೆ ಹಾನಿಗೊಳಗಾದ ಸ್ಲ್ಯಾಬ್‌ಗಳನ್ನು ದುರಸ್ತಿಪಡಿಸಬೇಕು ಎಂದು ತಿಳಿಸಿದರು.

ವೈಜ್ಞಾನಿಕ ಜಂಕ್ಷನ್ ಅಭಿವೃದ್ಧಿಗೆ ಒತ್ತು: ರಸ್ತೆ ಕಾಮಗಾರಿಗಳು ನಡೆಯುವ ಸ್ಥಳಗಳಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ಪರ್ಯಾಯ ಮಾರ್ಗ ಗುರುತಿಸಿ, ಸೂಕ್ತ ಸಂಚಾರ ವ್ಯವಸ್ಥೆ ಕಲ್ಪಿಸಬೇಕು. ಕಾಮಗಾರಿ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನಗತ್ಯ ತೊಂದರೆಯಾಗದಂತೆ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ವೈಟ್‌ಟಾಪಿಂಗ್ ಕಾಮಗಾರಿ ಕೈಗೊಳ್ಳುವಾಗ ರಸ್ತೆ ವಿನ್ಯಾಸ, ಅಗಲೀಕರಣ, ಡ್ರೈನೇಜ್ ಹಾಗೂ ಪಾದಚಾರಿ ಮಾರ್ಗಗಳ ಅಭಿವೃದ್ಧಿ ಒಟ್ಟಿಗೆ ಪರಿಗಣಿಸಬೇಕು. ವಿವಿಧ ಇಲಾಖೆಗಳ ಕಾಮಗಾರಿಗಳ ನಡುವೆ ಸಮನ್ವಯ ಸಾಧಿಸಿ, ಪುನರಾವರ್ತಿತ ಕಾಮಗಾರಿಗಳಿಂದ ಸಾರ್ವಜನಿಕರಿಗೆ ತೊಂದರೆ ಯಾಗದಂತೆ ನೋಡಿಕೊಳ್ಳಬೇಕು. ಕಾಮಗಾರಿಗಳ ಗುಣ ಮಟ್ಟ ಕಾಪಾಡುವುದರೊಂದಿಗೆ ನಿಗದಿತ ಯೋಜನೆ ಯಂತೆ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸಬೇಕು ಎಂದರು.

ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆಯ ಜಂಕ್ಷನ್‌ನಿಂದ ಗೆದ್ದಲಹಳ್ಳಿವರೆಗಿನ ಕಾಮಗಾರಿಗಳ ಸ್ಥಳವನ್ನು ಸಚಿವ ಕೃಷ್ಣ ಬೈರೇಗೌಡ ಪರಿಶೀಲನೆ ಮಾಡಿದರು. ಈ ವೇಳೆ ಕೆ.ಆರ್.ಪುರ ಶಾಸಕ ಬೈರತಿ ಬಸವರಾಜ್, ಜಿಬಿಎ ಮುಖ್ಯ ಆಯುಕ್ತ ಎಂ.ಮಹೇಶ್ವರ್ ರಾವ್, ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಸೇರಿದಂತೆ ಇನ್ನಿತರರು ಇದ್ದರು.

ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿಗೆ ಅಗತ್ಯವಿರುವ ಭೂಸ್ವಾಧೀನ ಹಾಗೂ ಜಾಗ ಹಸ್ತಾಂತರ ಪ್ರಕ್ರಿಯೆ ತ್ವರಿತವಾಗಿ ಪೂರ್ಣಗೊಳಿಸಿ. ಮುಖ್ಯ ರಸ್ತೆಯ ಜಂಕ್ಷನ್‌ಗಳಲ್ಲಿ ವಾಹನಗಳ ಸಂಚಾರ ಪ್ರಮಾಣ ಹಾಗೂ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ವೈಜ್ಞಾನಿಕ ಅಭಿವೃದ್ಧಿ ಯೋಜನೆ ರೂಪಿಸಿ.

- ಕೃಷ್ಣ ಬೈರೇಗೌಡ, ಬೆಂಗಳೂರು ಅಭಿವೃದ್ಧಿ ಸಚಿವ